# ಉದ್ಯೋಗಾವಕಾಶ ಹೆಚ್ಚಿಸಿ, ಪ್ರತಿಭಾ ಪಲಾಯನ ತಡೆಯಿರಿ: ಸ್ವರ್ಣವಲ್ಲಿ ಶ್ರೀ

ಕನ್ನಡ ಜನಾಂತರಂಗ ವರದಿ

ಯಲ್ಲಾಪುರ: '' ಉದ್ದಿಮೆಗಳನ್ನು ಪ್ರಾರಂಭಿಸಲು ಸಹಕಾರಿ ಸಂಘಗಳು ಉತ್ತೇಜನ ನೀಡಿ, ಉದ್ಯೋಗಾವಕಾಶ ಹೆಚ್ಚಿಸಿ, ಪ್ರತಿಭಾ ಪಲಾಯನ ತಡೆಯುವ ಪ್ರಯತ್ನ ಮಾಡಬೇಕು'' ಎಂದು ಸೋಂದಾ ಸ್ವರ್ಣವಲ್ಲಿ ಶ್ರೀಮದ್ ಗಂಗಧರೇಂದ್ರ ಸರಸ್ವತೀ ಸ್ವಾಮಿಗಳು ನುಡಿದರು.

ಅವರು ಗುರುವಾರ ಸಂಜೆ ಉಮ್ಮಚಗಿ ವ್ಯವಸಾಯ ಸೇವಾ ಸಹಕಾರಿ ಸಂಘದ ಶತಮಾನೋತ್ಸವ ಸಮಾರಂಭಕ್ಕೆ ಚಾಲನೆ ನೀಡಿ, ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

''ಈ ಪ್ರದೇಶದಲ್ಲಿನ ಜನರಲ್ಲಿನ ಪ್ರಾಮಾಣಿಕತೆಯಿಂದ ಸಹಕಾರಿ ಕ್ಷೇತ್ರ ಸೇರಿದಂತೆ ಹಲವು ರಂಗ ಉಳಿದುಕೊಂಡಿದೆ. ಸಮಾಜವನ್ನು ಸಂಸ್ಕಾರದ ಜೊತೆಗೆ ಜೋಡಿಸುವ ಕೆಲಸವಾಗಬೇಕು. ಸಂಸ್ಥೆ ಬೆಳೆಯುತ್ತ ಸಮಾಜವನ್ನು ಬೆಳೆಸುವ ಕೆಲಸವಾಗಲಿ'' ಎಂದರು.



ಶತಮಾನೋತ್ಸವಕ್ಕೆ ಸ್ವರ್ಣವಲ್ಲಿ ಶ್ರೀ

ಇದೇ ವೇಳೆ ಸಂಘದಲ್ಲಿ ಸೇವೆ ಸಲ್ಲಿಸಿದ ಅಧ್ಯಕ್ಷರ ಭಾವಚಿತ್ರವನ್ನು ಅನಾವರಣಗೊಳಿಸಿದರು.

ಕ್ಯಾಮ್ಕೋ ನಿರ್ದೇಶಕ ಶಂಭುಲಿಂಗ ಹೆಗಡೆ ಮಾತನಾಡಿ, ''ಸಹಕಾರಿ ತತ್ವವನ್ನು ಅಳವಡಿಸಿಕೊಂಡು ಸಂಘವನ್ನು ಗಟ್ಟಿಗೊಳಿಸಿದ್ದಾರೆ. ರೈತರ ಸವಾಲುಗಳನ್ನು ಎದುರಿಸಲು ಸಹಕಾರಿ ಸಂಘಗಳು ಮುಂದಾಗಬೇಕಿದೆ'' ಎಂದರು.

ಶ್ರೀಮಾತಾ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಜಿ ಎನ್ ಹೆಗಡೆ ಹಿರೇಸರ ಮಾತನಾಡಿ, ''ಸಂಸ್ಥೆಯ ಏಳಿಗೆಯಲ್ಲಿ ಸದಸ್ಯರ ಪಾಲುದಾರಿಕೆಯೂ ಇದೆ. ಗ್ರಾಹಕರ ಮತ್ತು ಸಂಸ್ಥೆಯ ನಡುವಿನ ಸಮನ್ವಯತೆಯಿದ್ದಲ್ಲಿ ಯಾವುದೇ ಸಂಘ ಉತ್ತಮವಾಗಿ ಬೆಳೆಯಬಲ್ಲುದು'' ಎಂದರು.

ಸಂಘದ ಉಪಾಧ್ಯಕ್ಷ ಎಂ ಪಿ ಹೆಗಡೆ ಚವತ್ತಿ, ನಿರ್ದೇಶಕರು ಉಪಸ್ಥಿತರಿದ್ದರು.

ಮಾಜಿ ಅಧ್ಯಕ್ಷರು, ಕಾರ್ಯದರ್ಶಿಗಳು, ಹಾಲಿ ಅಧ್ಯಕ್ಷ ಎಂ ಜಿ ಭಟ್ಟ ಸಂಕದಗುಂಡಿ, ಶಂಬುಲಿಂಗ ಹೆಗಡೆ, ಜಿ ಎನ್ ಹೆಗಡೆ ಹೀರೆಸರ, ಗುತ್ತಿಗೆದಾರ ಶ್ಯಾಮ್ ಭಟ್ಟ, ವಿನ್ಯಾಸಕಾ ವಸಂತ ಭಟ್ಟ, ಟಿ ಎಸ್ ಭಟ್ಟ ಅವರನ್ನು ಸನ್ಮಾನಿಸಲಾಯಿತು.